ಸಾಕ್ಷಿಗೆ ದಿನಾಂಕ 23.08.2017 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲುಃ- ವಾದಿ ಪರ ಶ್ರೀಮತಿ ಎಮ್.ವಿ.ಎಲ್ ವಕೀಲರಿಂದ**

1ನೇ ಪ್ರತಿವಾದಿಯ ತಂದೆಯನ್ನು ನೀವು ನೋಡಿರುತ್ತಿರಾ ಎಂದರೆ ಸಾಕ್ಷಿಯು ನೋಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಅಹ್ಮದಅಲಿ ತೀರಿಕೊಂಡು ಎಷ್ಟು ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು 40 ವರ್ಷಗಳಾಗಿರುತ್ತವೆ ಎಂದು ಹೇಳುತ್ತಾರೆ. ಅಹ್ಮದಅಲಿ ತಂದೆ ಹುಸೇನಸಾಬ ಇವರನ್ನು ನೋಡಿರುತ್ತಿರಾ ಎಂದರೆ ಸಾಕ್ಷಿಯು ನೋಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಹುಸೇನಸಾಬ ತೀರಿಕೊಂಡು ಎಷ್ಟು ವರ್ಷಗಳಾಗಿರುತ್ತವೆ ಎಂದರೆ ಸಾಕ್ಷಿಯು 60 ವರ್ಷಗಳಾಗಿರುತ್ತವೆ ಎಂದು ಹೇಳುತ್ತಾರೆ. ಹುಸೇನಸಾಬ ಇವರಿಗೆ ಎಷ್ಟು ಮಕ್ಕಳು ಇದ್ದರು ಎಂದರೆ ಸಾಕ್ಷಿಯು ಲಾಲಅಹ್ಮದ ಮತ್ತು ಅಹ್ಮದಅಲಿ ಇಬ್ಬರು ಮಕ್ಕಳು ಇದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಯ ಅಕ್ಕ-ಪಕ್ಕದಲ್ಲಿ ನಿಮ್ಮ ಜಮೀನು ಇರುತ್ತವೆಯೇ ಎಂದರೆ ಸಾಕ್ಷಿಯು ಒಂದು ಜಮೀನು ಬಿಟ್ಟು ಸನಂ 600 ಜಮೀನು ಇರುತ್ತದೆ ಎಂದು ಹೇಳುತ್ತಾರೆ. ಸನಂ 894/2 , 894/3 ಲಾಲಅಹ್ಮದ ಹಾಗೂ ಅಹ್ಮದಅಲಿ ಇವರ ಹೆಸರಿನಲ್ಲಿ ಬೇರೆ ಬೇರೆ ಪಹಣಿ ಪತ್ರಿಕೆಗಳು ಇದ್ದವು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಹೇಳುತ್ತಾರೆ. ಸನಂ 894/2 ಅಹ್ಮದಅಲಿ ಇವರ ಹೆಸರಿನಲ್ಲಿ ಇತ್ತು ಹಾಗೂ ಸನಂ 894/3 ಲಾಲಅಹ್ಮದ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಿದ್ದಮ್ಮ ಇವರು ಸದರಿ ಎರಡು ಜಮೀನುಗಳನ್ನು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು 2010ನೇ ಸಾಲಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಎರಡುಜಮೀನುಗಳಲ್ಲಿ ಸಿದ್ದಮ್ಮ ಇವರ ಮಾವ ಇವರು ಬಹಳ ವರ್ಷಗಳಿಂದ ಎರಡು ಜಮೀನುಗಳಲ್ಲಿ ಸ್ವಾಧೀನದಲ್ಲಿ ಇದ್ದರು ಎಂದು ಹೇಳುವದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸಿದ್ದಮ್ಮ ವಿರುದ್ದ ಈ ದಾವೆಯನ್ನು ಯಾರು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿಯು 1ನೇ ಪ್ರತಿವಾದಿಯೊಂದಿಗೆ ಕೂಡಿಕೊಂಡು 2ನೇ ಪ್ರತಿವಾದಿಗೆ ಬ್ಲಾಕಮೇಲ್ ಮಾಡುತ್ತಿದ್ದಾರೆ ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬರೆಯಿಸಿರುತ್ತಿರಿ ಸಾಕ್ಷಿಯು ನಾನು ಊರಲ್ಲಿ ಇರುವುದರಿಂದ ನನಗೆ ಮಾಹಿತಿ ಇರುತ್ತದೆ ಎಂದು ಹೇಳುತ್ತಾರೆ. 2ನೇ ಪ್ರತಿವಾದಿ ಸಿದ್ದಮ್ಮ ಹಾಗೂ ಅವರ ಮಾವ ದಾವಾ ಆಸ್ತಿಗಳಲ್ಲಿ ಬಹಳ ವರ್ಷಗಳಿಂದ ಸ್ವಾಧಿನದಲ್ಲಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ 5 ಎಕರೆ 24 ಗುಂಟೆ ಜಮೀನಿನ ಮಾಲೀಕನಿರುತ್ತಾನೆ ಮತ್ತು ವಾದಿಗಳು ಸದರಿ ಜಮೀನಿಗೆ

ಸಂಬಂಧ ಇರುವುದಿಲ್ಲ ಎಂದು ಹೇಳಿರುವದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ 2ನೇ ವಾದಿ ಸಿದ್ದಮ್ಮ ಇವರ ಮಾತು ಕೇಳಿ ವಾದಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

{ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.}

ಓ. ಹೇ. ಕೇ. ಸರಿ ಇದೆ.

(ಪ್ರಕಾಶ್ ಅರ್ಜುನ ಬನಸೊಡೆ)
ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.